Spl.C(SC/ST) No.26 /2022,
ಪ್ರಾಸಾಃ 3

## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ

## Spl.C (SC/ST) No.26/2022

| | | | |
|---|---|---|---|
| ಹೆಸರು | ವಂದನಾ | ಚಾಸಾಃ3 | ಪ್ರಾಸಾಃ 3 |
| ತಂದೆಯ ಹೆಸರು | ಶ್ರೀರಾಮಯ್ಯ | | |
| ವಯಸ್ಸು | 24 ವರ್ಷ | ಸಾಕ್ಷಿಯನ್ನು ದಿಃ23.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಶೆಟ್ಟಿಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-1 ಸುಭಾಷಿಣಿ ನನ್ನ ಅಕ್ಕ, ಚಾಸಾ-2 ಗೌರಮ್ಮ ನನ್ನ ತಾಯಿ, ಚಾಸಾ-4 ರತ್ನಮ್ಮ ನನ್ನ ಚಿಕ್ಕಮ್ಮ, ಚಾಸಾ-5 ಅಮರನಾರಾಯಣ ನನ್ನ ತಮ್ಮ. ಚಾಸಾ-6 ಮಂಜುನಾಥ, ಚಾಸಾ-7 ನರಸಿಂಹ, ಚಾಸಾ-8 ನರಸಿಂಹಮೂರ್ತಿ, ಚಾಸಾ-9 ಕೃಷ್ಣಮೂರ್ತಿ, ಚಾಸಾ-10 ಎಂ.ನರಸಿಂಹಮೂರ್ತಿ ಮತ್ತು ಚಾಸಾ-11 ಕೆ.ನಾಗರಾಜ್ ರವರು ಗೊತ್ತು, ಅವರು ನಮ್ಮ ಊರಿನವರು. ನಾವು ಪರಿಶಿಷ್ಟ ಪಂಗಡದ ನಾಯಕ ಜನಾಂಗಕ್ಕೆ ಸೇರಿದವನಾಗಿರುತ್ತೇವೆ. ಈಗ ನ್ಯಾಯಾಲಯದಲ್ಲಿ ಇರುವ 1 ರಿಂದ 4 ಮತ್ತು 6 ನೇ ಅರೋಪಿತರು ಗೊತ್ತು ಹಾಗೂ ಈ ದಿನ ಗೈರು ಹಾಜರಿರುವ 5 ನೇ ಅರೋಪಿ ಗೊತ್ತು, ಆತನನ್ನು ನೋಡಿದರೆ ಗುರುತಿಸುತ್ತೇನೆ (ಅರೋಪಿಯ ಪರ ವಕೀಲರ ಕಲಂ.317 ಸಿ.ಅರ್.ಪಿ.ಸಿ ರಡಿಯಲ್ಲಿ ಅರ್ಜಿ ಸಲ್ಲಿಸಿ, 5 ನೇ ಅರೋಪಿಯ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ). ಅರೋಪಿತರು ವಕ್ಕಲಿಗ ಜನಾಂಗಕ್ಕೆ ಸೇರಿಸಿದವರು ಅಗಿರುತ್ತಾರೆ.

2. ದಿಃ02.05.2022 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು, ನನ್ನ ಅಮ್ಮ, ನನ್ನ ಅಕ್ಕ, ನನ್ನ ತಮ್ಮ ಮತ್ತು ಚಿಕ್ಕಮ್ಮರವರು ನಮ್ಮ ಮನೆಯಲ್ಲಿ ಇದ್ದೆವು.

ಆ ಸಮಯದಲ್ಲಿ ನನ್ನ ತಾಯಿ ಮನೆಯ ಕಂಪೌಂಡ್‌ನಲ್ಲಿ ನಿಂತು ನರಸಿಂಹಮೂರ್ತಿ ಎಂಬುವವರ ಜೊತೆ ಮಾತನಾಡುತಿದ್ದರು. ಆಗ ನಮ್ಮ ಮನೆಯ ಪಕ್ಕದಾ ಮನೆಯವರಾದ 1ನೇ ಆರೋಪಿಯು ಫೋನ್ ನಲ್ಲಿ ನಮ್ಮನ್ನೆ ಬೈಯುತ್ತಿದ್ದಾರೆ ಎಂದು ಬಾವಿಸಿ, ರಸ್ತೆಯಲ್ಲಿ ನಿಂತು, ನಮ್ಮ ತಾಯಿಯನ್ನು ಉದ್ದೇಶಿಸಿ "ಏ ಸೂಳೆ ಮುಂಡೆ, ಲುಚ್ಚಾ ಮುಂಡೆ, ಲೋಫರ್ ಮುಂಡೆ " ಎಂದು ಅವಾಚ್ಯ ಶಬ್ದಗಳಿಂದ ಬೈಯುತಿದ್ದು, ಆಗ ನನ್ನ ತಾಯಿ 1ನೇ ಅರೋಪಿಗೆ ಉದ್ದೇಶಿಸಿ ನಿಮಗೆ ಬೈದಿಲ್ಲ ಎಂದು ಹೇಳಿದ್ದು ಅದಕ್ಕೆ 1ನೇ ಆರೋಪಿಯು ಇರಿ ನಿಮಗೆ ಒಂದು ಗತಿ ಕಾಣಿಸುತ್ತೇವೆ ಎಂದು ಹೇಳಿ, 2 ರಿಂದ 6ನೇ ಅರೋಪಿತರನ್ನು ಸ್ವಳಕ್ಕೆ ಕರೆಯಿಸಿಕೊಂಡಿದ್ದು, 4 ಮತ್ತು 5ನೇ ಅರೋಪಿತರು ಒಂದು ಬೈಕ್ ನಲ್ಲಿ ಹಾಗೂ 2ನೇ ಆರೋಪಿಯು ಒಂದು ಬೈಕ್ ನಲ್ಲಿ ಬಂದು ನಮ್ಮ ಮನೆಯ ಕಂಪೌಂಡ್ ಮುಂದೆ ಬೈಕ್ ಗಳನ್ನು ನಿಲ್ಲಿಸಿರುತ್ತಾರೆ. ಆನಂತರ 2ನೇ ಅರೋಪಿಯು ನಮ್ಮ ಮನೆಯ ಕಂಪೌಂಡ್ ಜಿಗಿದು ಒಳಗೆ ಬಂದು, ಕಂಪೌಂಡ್‌ನಲ್ಲಿ ಇದ್ದ ನನ್ನ ತಮ್ಮ ಅಮರನಾರಾಯಣ ಎಡ ಕೆನ್ನೆಗೆ ಕೈಯಿಂದ ಹೊಡೆದಿರುತ್ತಾನೆ. ಆ ಸಮಯದಲ್ಲಿ ನಾವೆಲ್ಲರೂ ಕಂಪೌಂಡ್ ನಲ್ಲಿ ಇದ್ದು ಅರೋಪಿತರೆಲ್ಲಾರೂ ನಮಗೆ ಹೊಡೆಯಲು ಬಂದಿರುತ್ತಾರೆ, 1ನೇ ಆರೋಪಿಯು ನನ್ನ ತಾಯಿಯ ಜುಟ್ಟು ಹಿಡಿದು ಎಳೆದಾಡಿ, ಕೈಯಿಂದ ಸೊಂಟಕ್ಕೆ ಮತ್ತು ಬೆನ್ನಿಗೆ ಕೈಯಿಂದ ಹಲ್ಲೆ ಮಾಡಿರುತ್ತಾಳೆ ಹಾಗೂ ನೀವು ಕೆಟ್ಟ ಜಾತಿಯವರು, ಕೆಳಜಾತಿಯವರು, ನಿಮ್ಮನ್ನು ಇಲ್ಲಿಂದ ಓಡಿಸಬೇಕು ಎಂದು ಹೇಳಿ, ನೀವು ನಮ್ಮ ಮೇಲೆ ಜಗಳಕ್ಕೆ ಬರುತ್ತೀರಾ, ಇವತ್ತು ನಿಮಗೆ ಒಂದು ಗತಿ ಕಾಣಿಸುತ್ತೇವೆ ಎಂದು ಹೇಳಿರುತ್ತಾಳೆ. ಅದ್ದರಿಂದ ಭಯಗೊಂಡು ನನ್ನ ತಾಯಿ ಮತ್ತು ನನ್ನ ಅಕ್ಕ ಇಬ್ಬರು ಸೇರಿ ನನ್ನ ತಮ್ಮನನ್ನು ಒಳಗೆ ಕರೆದುಕೊಂಡು ಹೋಗಿರುತ್ತಾರೆ ಹಾಗೂ ನಾನು ಕಂಪೌಂಡ್ ಒಳಗೆ ಇದ್ದೆ. ಆಗ 1ನೇ ಆರೋಪಿಯು ಉಳಿದ ಅರೋಪಿತರಿಗೆ "ಅವಳನ್ನು ಈ ದಿನ ಬಿಡಬೇಡಿ, ಇವತ್ತು ಒಂದು ಗತಿ

ಕಾಣಿಸೋಣಾ" ಎಂದು ಹೇಳಿದ್ದು, ಆ ಸಮಯದಲ್ಲಿ 4 ಮತ್ತು 5 ನೇ ಆರೋಪಿತರು ನಾನು ತೊಟ್ಟಿದ್ದ ಟಾಪ್ ನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ, ಅವರಿಂದ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, 2 ನೇ ಆರೋಪಿಯು ಒಂದು ಕಲ್ಲನ್ನು ನನ್ನ ಬಲಗಾಲಿನ ಮೇಲೆ ಹಾಕಿರುತ್ತಾನೆ, ನನಗೆ ರಕ್ತಗಾಯವಾಗಿರುತ್ತದೆ, ಆ ಸಮಯದಲ್ಲಿ ನನ್ನ ಚಿಕ್ಕಮ್ಮ ಜಗಳ ಬಿಡಿಸಲು ಬಂದಿದ್ದು, 6 ನೇ ಅರೋಪಿಯು ಮರದ ತುಂಡಿನಿಂದ ನನ್ನ ಚಿಕ್ಕಮ್ಮನ ಎಡ ಹಣೆಯ ಮೇಲೆ ಹೊಡೆದಿರುತ್ತಾನೆ, ಆಗ ರಕ್ತಗಾಯವಾಗಿರುತ್ತದೆ, ಆನಂತರ ನಾವೆಲ್ಲಾರೂ ಪ್ರಾಣ ಭಯದಿಂದ ಮನೆಯ ಒಳಗೆ ಹೋಗಿರುತ್ತೇವೆ, ಅದರೂ ಸಹ ಅರೋಪಿತರು ಮನೆಯ ಬಾಗಿಲ ಮೂಲಕ ಕಲ್ಲನ್ನು ಎಸೆದಿರುತ್ತಾರೆ, ಆನಂತರ ನಾವು ಬಾಗಿಲನ್ನು ಮುಚ್ಚಿರುತ್ತೇವೆ. ಆ ಸಮಯಕ್ಕೆ ಚಾಸಾ-6 ರಿಂದ ಚಾಸಾ-9 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಆನಂತರ ಆರೋಪಿತರು ಅಲ್ಲಿಂದ ಹೋಗುವಾಗ "ನೀವು ಕೆಳ ಜಾತಿಯವರು, ನಿಮ್ಮನ್ನು ಸಾಯಿಸದೆ ಬಿಡುವುದಿಲ್ಲ" ಎಂದು ಬೆದರಿಕೆ ಹಾಕಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ಕೋರಿದ್ದು, ಅನುಮತಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

**ಓ.ಹೇ.ಕೇ.ಸ.ಇದೆ.**

**(ಮಾಯಣ್ಣ ಬಿ.ಎಲ್ )**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕೋಲಾರ.**

Spl.C(SC/ST) No.   /2023